# <u>ನಗರಸಭಾ ಕಾರ್ಯಾಲಯ, ರಾಮನಗರ</u>

ಸಂ: ವಿಶೇಷಸಭೆ/06/06-07 ದಿನಾಂಕ: 20-11-06

ದಿನಾಂಕ: **20-11-06** ರಂದು ಸೋಮವಾರ ಸಂಜೆ 4.00 ಘಂಟೆಗೆ ನಗರಸಭೆಯ ಪ್ರಶಸ್ತಿ ಭವನದಲ್ಲಿ **ಶ್ರೀ.ಸೈಯದ್ ಖಿಜರ್ ಪಾಷ, ಅಧ್ಯಕ್ಷರು,** ನಗರಸಭೆ ರಾಮನಗರ ರವರ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಭೆಯ ನಡವಳಿಗಳು.

| ಹಾಜರಿ-14 | ಗೈರುಹಾಜರಿ-16 | ಖಾಲಿ-1 | ಒಟ್ಟು-31 |
|---|---|---|---|
| XXX | XXX | XXX | XXX |

ವಿಷಯ-73:- ಕೇಂದ್ರ ಪುರಸ್ಕೃತ ಯು.ಐ.ಡಿ.ಎಸ್.ಎಸ್.ಎಂ.ಟಿ (UIDSSMT) ಯೋಜನೆಯಡಿಯಲ್ಲಿ ರಾಮನಗರ ನಗರದ ಅಭಿವೃದ್ದಿಗಾಗಿ ತಯಾರಿಸಿರುವ ಯೋಜನೆಗಳನ್ನು ಪ್ರಸ್ತಾವಿಸಿ ಮಂಜೂರಾತಿಗಾಗಿ ಸರ್ಕಾರವನ್ನು ಕೋರಿಕೊಳ್ಳುವ ವಿಚಾರ.

ತಿರ್ಮಾನ-73: ಕೇಂದ್ರ ಸರ್ಕಾರದ ಯು.ಐ.ಡಿ.ಎಸ್.ಎಸ್.ಎಂ.ಟಿ (UIDSSMT) ನೂತನ ಯೋಜನೆಯ ಮಾರ್ಗಸೂಚಿಗಳನ್ನು ಸಭೆಗೆ ತಿಳಿಸಲಾಯಿತು. ಕೌನ್ಸಿಲ್ ಸದಸ್ಯರೊಂದಿಗೆ ಚರ್ಚಿಸಿ ಪಟ್ಟಣದಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯನ್ನು ನೀಗಲು ಹಾಗೂ ಮುಂದಿನ 20-25 ವರ್ಷಗಳಿಗೆ ಅವಶ್ಯವಿರುವ ಸಾರ್ವಜನಿಕ ಸೌಕರ್ಯಗಳನ್ನು ಉದಾ: ನಗರ ಪುನರ್ಜ್ಜೀವನ, ರಸ್ತೆಗಳು ಹಾಗೂ ಚರಂಡಿಗಳು, ಮಳೆನೀರು ಚರಂಡಿಗಳು ಇತ್ಯಾದಿಗಳನ್ನು ಯೋಜಿಸಿ ಭವಿಷ್ಯತ್ತಿನಲ್ಲಿ ಹೊಂದಲು ಯೋಜನೆಗಳನ್ನು ಕೇಂದ್ರ ಪರಿಷ್ಕೃತ ಯು.ಐ.ಡಿ.ಎಸ್.ಎಸ್.ಎಂ.ಟಿ (UIDSSMT) ಯೋಜನೆಯಡಿಯಲ್ಲಿ ಅನುದಾನಕ್ಕಾಗಿ ಪ್ರಸ್ತಾವಿಸಲು ಹಾಗೂ ಈ ಕೆಳಕಂಡ ಯೋಜನೆಗಳ ಸ್ಥೂಲ ಯೋಜನಾ ವರದಿಗಳನ್ನು ತಯಾರಿಸಿ ಸಲ್ಲಿಸಲು ತೀರ್ಮಾನಿಸಲಾಯಿತು. ರಾಮನಗರ ವ್ಯಾಪ್ತಿಯಲ್ಲಿ ಈ ಹಿಂದೆ ಕೆ.ಯು.ಐ.ಡಿ.ಪಿ ಯೋಜನೆ ಅನ್ವಯ ನೀರು ಸರಬರಾಜು ಹಾಗೂ ಒಳಚರಂಡಿ ಕೆಲಸವು ಸಾಕಷ್ಟು ಆಗಿರುವುದರಿಂದ ಹಾಗೂ ಕೊಳಚೆ ನಿರ್ಮೂಲನ ಮಂಡಳಿಯವರು ಕೊಳಚೆ ಪ್ರದೇಶಕ್ಕೆ ಹೆಚ್ಚಿನ ಆಧ್ಯತೆ ನೀಡುತ್ತಿರುವುದರಿಂದ ಇವುಗಳ ಮೇಲೆ ಹೆಚ್ಚಿನ ಒತ್ತಡವಿಲ್ಲದೆ ತುರ್ತಾಗಿ ಬೇಕಾಗಿರುವ ರಸ್ತೆಗಳು ಹಾಗೂ ಚರಂಡಿಗಳು, ಮಳೆನೀರು ಚರಂಡಿ, ನಗರ ನೈರ್ಮಲ್ಯ ಇತ್ಯಾದಿ, ಇಂತಹ ಕೆಲಸಗಳಿಗೆ ಹೆಚ್ಚಿನ ಆಧ್ಯತೆ ನೀಡಲಾಗಿದ್ದು ಈ ಸಂಬಂಧ ಕೇಂದ್ರ ಹಾಗೂ ರಾಜ್ಯ ಸರ್ಕಾರ ಸೂಚಿಸಿರುವ ಸುಧಾರಣೆಗಳನ್ನು (Reforms) ಸಮಯಬದ್ದವಾಗಿ ಅನುಷ್ಠಾನಿಸಲು ಒಪ್ಪಲಾಯಿತು. ಅಲ್ಲದೆ, ಯೋಜನೆಗಳನ್ನು ಯು.ಐ.ಡಿ.ಎಸ್.ಎಸ್.ಎಂ.ಟಿ ಯೋಜನೆಯ ಮಾರ್ಗಸೂಚಿಗನುಸಾರವಾಗಿ (ಯು.ಐ.ಡಿ.ಎಸ್.ಎಸ್.ಎಂ.ಟಿ ಗೈಡ್‌ಲೈನ್ಸ್) ಅನುಷ್ಠಾನಗೊಳಿಸಲು ಸಭೆಯು ಒಪ್ಪಿ ನಗರದ ಅಭಿವೃದ್ದಿಗಾಗಿ ಈ ಕೆಳಕಂಡ ಯೋಜನೆಗಳನ್ನು ಅಂದಾಜು ಯೋಜನಾ ವೆಚ್ಚದೊಂದಿಗೆ ಪ್ರಸ್ತಾವಿಸಲು ತೀರ್ಮಾನಿಸಲಾಯಿತು ಹಾಗೂ ಈ ಯೋಜನೆಯ ವೆಚ್ಚದ ಬಾಬ್ತು ಈ ನಗರಸಭೆಯ ಪಾಲಿನ ಮೊತ್ತ ಶೇ 10 ಅಂದರೆ ರೂ. 520.05 ಲಕ್ಷ ಗಳನ್ನು ಎಸ್.ಎಫ್.ಸಿ ಅನುದಾನದಿಂದ ಭರಿಸಬಹುದೆಂದು ಸಭೆಯು ಸರ್ವಾನುಮತದಿಂದ ಸಮ್ಮತಿಸಲಾಯಿತು.



PDF Created with deskPDF PDF Writer - Trial :: http://www.docudesk.com

| ಕ್ರ.ಸಂ | ಯೋಜನಾ ವಿವರ | ಯೋಜನಾ ವೆಚ್ಚ (ರೂ. ಲಕ್ಷಗಳಲ್ಲಿ) |
|---|---|---|
| 1 | ಹಾಲಿ ಇರುವ ಮಣ್ಣಿನ (ಮಡ್) ರಸ್ತೆಗಳಿಗೆ ಜಲ್ಲಿ ಬಿಚಾವಣೆ ಮಾಡಿ ಡಾಂಬರ್(ಅಸ್ಫಾಲ್ಟ್) ಕಾಮಗಾರಿ ನಿರ್ವಹಣೆ (ರಸ್ತೆ ಬದಿ ಚರಂಡಿ ಹಾಗು ಕಲ್ವರ್ಟ್ ನಿರ್ಮಾಣ ಸೇರಿ) | 1157.68 |
| 2 | ಹಾಲಿ ಇರುವ ಜಲ್ಲಿ ರಸ್ತೆಗಳಿಗೆ ಡಾಂಬರ್ ಕಾಮಗಾರಿ ನಿರ್ವಹಣೆ (ರಸ್ತೆ ಬದಿ ಚರಂಡಿ ಹಾಗು ಕಲ್ವರ್ಟ್ ನಿರ್ಮಾಣ ಸೇರಿ) | 105.88 |
| 3 | ಹಾಲಿ ಇರುವ ಡಾಂಬರ್(ಅಸ್ಫಾಲ್ಟ್) ರಸ್ತೆಗಳನ್ನು ಬಲಗೊಳಿಸುವುದು. (Strengthening) (ರಸ್ತೆ ಬದಿ ಚರಂಡಿ ಹಾಗು ಕಲ್ವರ್ಟ್ ನಿರ್ಮಾಣ ಸೇರಿ) | 221.75 |
| 4 | ಕಿರಿದಾದ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು. (ರಸ್ತೆ ಬದಿ ಚರಂಡಿ ಹಾಗು ಕಲ್ವರ್ಟ್ ನಿರ್ಮಾಣ ಸೇರಿ) | 255.25 |
| 5 | ಮಳೆ ನೀರಿನ ಚರಂಡಿ ನಿರ್ಮಾಣ ಕಾಮಗಾರಿ | 3460.00 |
| **ಒಟ್ಟು** | | **5200.56** |

ವಿಷಯ-74:- ಕೋತ್ತಿಪುರ ಹಾಗೂ ಅದರ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಾಸವಿರುವ ನಾಗರೀಕರಿಗೆ ಕುಡಿಯುವ ನೀರಿನ ವ್ಯವಸ್ಥೆಗಾಗಿ ನೀರಿನ ಓವರ್ ಹೆಡ್ ಟ್ಯಾಂಕ್ ಇಲ್ಲದೆ ತೊಂದರೆಯಾಗಿದ್ದು ಟಯೋಟಾ ಕಿರ್ಲೋಸ್ಕರ್ ಸಂಸ್ಥೆಯವರು ಮುಪತ್ತಾಗಿ ನಿರ್ಮಿಸಿಕೊಡಲು ಮುಂದೆ ಬಂದಿರುವುದರಿಂದ ಓವರ್ ಹೆಡ್ ಟ್ಯಾಂಕ್ ನಿರ್ಮಾಣಕ್ಕಾಗಿ ಶ್ರೀ. ಆಲ್ ಅಜ್ ಸೈಯದ್ ಇಶಾಕ್ ಬಿನ್ ಆಲ್ ಅಜ್ ಆರೀಪ್ ಮದ್ನಿ ಇವರ ನಿವೇಶನ ಖಾತೆ ನಂ.306/905/397/23 ಅಳತೆ 30 50 ಮತ್ತು 307/906/397/24 ಅಳತೆ 30 50 ಅಡಿಗಳ ನಿವೇಶನ ಸೂಕ್ತವೆಂದು ಕಂಡುಬಂದಿದ್ದು, ಸದರಿಯವರು ನೀಡಲು ಒಪ್ಪಿರುತ್ತಾರಾದ್ದರಿಂದ ಸದರಿ 2 ನಿವೇಶನಗಳನ್ನು ಖರೀದಿಸಿ ಟಯೋಟಾ ಕಿರ್ಲೋಸ್ಕರ್ ಸಂಸ್ಥೆಗೆ ಹಸ್ತಾಂತರಿಸಲು ಚರ್ಚಿಸಿ ತೀರ್ಮಾನಿಸುವ ವಿಚಾರ.

ತಿರ್ಮಾನ-74: ವಿಷಯದ ಬಗ್ಗೆ ಸಭೆಗೆ ಪೌರಾಯುಕ್ತರು ವಿವರಿಸಿದರು. ನಂತರ ಅಧ್ಯಕ್ಷರು ವಸ್ತಾವಾಂಶವನ್ನು ವಿವರಿಸಿ ಕೊತ್ತಿಪುರ ಮತ್ತು ಟಿಪ್ಪುನಗರ ಜನತೆಯ ಹಿತದೃಷ್ಟಿಯಿಂದ ಕುಡಿಯುವ ನೀರಿನ ವ್ಯವಸ್ಥೆಗಾಗಿ ನೀರಿನ ಓವರ್ ಹೆಡ್ ಟ್ಯಾಂಕ್ ನಿರ್ಮಿಸಬೇಕಾಗಿದ್ದು ಟಯೋಟಾ ಕಿರ್ಲೋಸ್ಕರ್ ಸಂಸ್ಥೆಯವರು ಮುಪತ್ತಾಗಿ 10.00 ಲಕ್ಷ ಲೀಟರ್ ಟ್ಯಾಂಕನ್ನು ನಿರ್ಮಿಸಿಕೊಡಲು ಮುಂದೆ ಬಂದಿರುವುದರಿಂದ ಟ್ಯಾಂಕ್ ನಿರ್ಮಾಣಕ್ಕೆ ನಿವೇಶನದ ಅಗತ್ಯವಿರುವುದನ್ನು ಗಮನಿಸಿ ಪರಿಶೀಲಿಸಲಾಗಿ, ಶ್ರೀ. ಆಲ್ ಅಜ್ ಸೈಯದ್ ಇಶಾಕ್ ಬಿನ್ ಆಲ್ ಅಜ್ ಆರೀಪ್ ಮದ್ನಿ ಇವರು ಮುಂದೆ ಬಂದ ಕಾರಣ ಸದರಿ ನಿವೇಶನಗಳು ಟ್ಯಾಂಕ್ ನಿರ್ಮಾಣಕ್ಕೆ ತಾಂತ್ರಿಕವಾಗಿ ಸೂಕ್ತವೆಂದು ಕಂಡುಬಂದಿದ್ದು ಈ ಸಂಬಂಧ ನಿವೇಶನದ ಮಾಲೀಕರೊಡನೆ ಹಾಗೂ ಹಲವು ಸದಸ್ಯರ ಸಮ್ಮುಖದಲ್ಲಿ ಸಮಾಲೋಚಿಸಿ ರಾಮನಗರ ವ್ಯಾಪ್ತಿಯಲ್ಲಿ ನಿವೇಶನಗಳ ಬೆಲೆ ಗಗನಕ್ಕೇರಿದ್ದು ಸದರಿ ನಿವೇಶನ ಮಾಲೀಕರಿಗೆ ಒಪ್ಪಿಸಿ ಒಂದು ನಿವೇಶನಕ್ಕೆ ಕನಿಷ್ಠ ಬೆಲೆ ರೂ. 1.25 ಲಕ್ಷಗಳಿಗೆ ತೀರ್ಮಾನಿಸಿ, ನಾಗರೀಕರ ನೀರಿನ ಭವಣೆ ಹಿತ ದೃಷ್ಠಿಯಿಂದ ಜರೂರು ಟ್ಯಾಂಕ್ ನಿರ್ಮಿಸಿಕೊಡಲು ಕೋರಲಾಗಿದೆ. ಈ ಮೇರೆಗೆ ದಿ: 6-12-2006 ರಂದು ಮಾನ್ಯ ಮುಖ್ಯಮಂತ್ರಿಗಳು ಉದ್ಘಾಟನೆ ಕಾರ್ಯಕ್ರಮವನ್ನು ನೇರವೇರಿಸಿಕೊಡುವ ದೃಷ್ಠಿಯಿಂದ ಜರೂರಾಗಿ ನಿವೇಶನಗಳನ್ನು ಟಯೋಟಾ ಕಿರ್ಲೋಸ್ಕರ್ ಸಂಸ್ಥೆಯವರಿಗೆ ವಹಿಸಿಕೊಡಬೇಕಾಗಿರುವುದರಿಂದ ನಗರಸಭೆ ಸ್ವಾಧೀನಕ್ಕೆ ಪಡೆಯಬೇಕಾಗಿರುತ್ತದೆ. ಆದ್ದರಿಂದ ವಿಷಯದಲ್ಲಿ ವಿವರಿಸಿರುವ 2 ನಿವೇಶನಗಳನ್ನು ರೂ. 2.50 ಲಕ್ಷಗಳಿಗೆ ಮತ್ತು

PDF Created with deskPDF PDF Writer - Trial :: http://www.docudesk.com

ನೊಂದಣಿ ಮಾಡಿಸಿಕೊಳ್ಳಬೇಕಾಗಿರುತ್ತೆಂದು ಸಭೆಗೆ ವಿವರಿಸಿದರು. ನಂತರ ಸಭೆಯು ಅಧ್ಯಕ್ಷರ ವಿಚಾರವನ್ನು ಸರ್ವಾನುಮತದಿಂದ ಅನುಮೋದಿಸಿ ಮಾನ್ಯ ಜಿಲ್ಲಾಧಿಕಾರಿಗಳವರ ಅನುಮತಿ ನಿರೀಕ್ಷಣೆ ಮೇರೆಗೆ ನಿವೇಶನಗಳ ನೊಂದಣಿಗೆ ತಗಲುವ ಖರ್ಚು ಮತ್ತು ನಿವೇಶನದ ಬೆಲೆಯನ್ನು ನಗರಸಭಾ ನಿಧಿಯಿಂದ ಪಾವತಿಸಿ ನೊಂದಣಿ ಮಾಡಿಸಿಕೊಂಡು ಟಯೋಟಾ ಕಿರ್ಲೋಸ್ಕರ್ ಸಂಸ್ಥೆಯವರಿಗೆ ಹಸ್ತಾಂತರಿಸಲು ಪೌರಾಯುಕ್ತರಿಗೆ ಅಧಿಕಾರ ನೀಡುವುದೆಂದು ಸಭೆಯು ಸರ್ವಾನುಮತದಿಂದ ಸಮ್ಮತಿಸಿತು. ನಂತರ ಮಾನ್ಯ ಜಿಲ್ಲಾಧಿಕಾರಿಗಳವರು ವಾಸ್ತವಾಂಶವನ್ನು ಪರಿಗಣಿಸಿ ಅನುಮತಿ ದೊರಕಿಸಿಕೊಡುವಂತೆ ಕೋರಿಕೊಳ್ಳುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

- ಸಹಿ -
ಅಧ್ಯಕ್ಷರು
ನಗರಸಭೆ, ರಾಮನಗರ.

"ನಕಲು"

ಪೌರಾಯುಕ್ತರು,
ನಗರಸಭೆ, ರಾಮನಗರ.

PDF Created with deskPDF PDF Writer - Trial :: http://www.docudesk.com

PDF Created with deskPDF PDF Writer - Trial :: http://www.docudesk.com